# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬಿಬಿಎಂಪಿ/ವಾ.22/ಜೆ.ಸಿ ಉ/ಪಿಆರ್/26/2020-21

ಸಹಾಯಕ ಅಭಿಯಂತರರ ಕಛೇರಿ
ಜೆ.ಸಿ ನಗರ ಉಪ-ವಿಭಾಗ, ಪೂರ್ವ ವಿಭಾಗ
ವಿ. ನಾಗೇನಹಳ್ಳಿ, ವಾರ್ಡ್ ನಂ:22
ಬೆಂಗಳೂರು-560032
ದಿನಾಂಕ:03-04-2021.

## ದಿನಾಂಕ: 03-04-2021 ರಂದು ವಾರ್ಡ್ ಸಮಿತಿಯ ಸಭೆಯ ನಡವಳಿಗಳು:-

ಸಭೆಗೆ ಹಾಜರಿದ್ದವರು:

- ಶ್ರೀ. ರಾಮಕೃಷ್ಣರೆಡ್ಡಿ, ಕಾರ್ಯಪಾಲಕ ಅಭಿಯಂತರರು, ನೋಡೆಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ.
- ಶ್ರೀ. ಗುರುಸಿದ್ದಪ್ಪ .ಜಿ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ
- ಶ್ರೀ. ರಾಜಶೇಖರ .ಎನ್, ಮಾಜಿ ಪಾಲಿಕೆ ಸದಸ್ಯರು, ವಿ. ನಾಗೇನಹಳ್ಳಿ
- ಶ್ರೀ. ವಿನೋದ್, ಕಂದಾಯ ವಸೂಲಿಗಾರು
- ಶ್ರೀ. ಮುನಿರಾಮಣ್ಣ ಸದಸ್ಯರು
- ಶ್ರೀಮತಿ ಉಷಾರಾಣಿ, ಹಿರಿಯ ಆರೋಗ್ಯ ಪರೀವೀಕ್ಷಕರು, ಘನತ್ಯಾಜ್ಯ
- ಶ್ರೀ. ಶಿವನಾಯಕ, ಕಿರಿಯ ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ
- ಶ್ರೀಮತಿ. ಉಷಾರಾಣಿ, ಕಲ್ಯಾಣ ಇಲಾಖೆ
- ಶ್ರೀ. ಕಲಿಲ್ ರೆಹಮಾನ್, KRWB ಸದಸ್ಯರು
- ಶ್ರೀ. ಚಂದ್ ಪಾಷ, KRWB ಸದಸ್ಯರು
- ಶ್ರೀ. ಶೆಕ್ ರುಮಾನ್, ವಾರ್ಡ್ ಮಾರ್ಷಲ್, ವಿ. ನಾಗೇನಹಳ್ಳಿ
- ಶ್ರೀ. ರವಿ, ನಾಗರೀಕರು, ನಾಗರೀಕರು
- ಶ್ರೀ. ಸಂದೀಪ್, ನಾಗರೀಕರು ಪ್ರಭಾಕರ್ ಲೇಔಟ್
- ಶ್ರೀ. ಎ.ಕೆ ಪ್ರೇಮ ಕುಮಾರ್, ನಾಗರೀಕರು
- ಶ್ರೀಮತಿ ಸುನಿತಾ.ಡಿ, ನಾಗರೀಕರು

- ಶ್ರೀ. ವಿಜಯ್, ನಾಗರೀಕರು
- ಶ್ರೀ. ರಾಮಲಿಂಗಮ್, ನಾಗರೀಕರು
- ಶ್ರೀಮತಿ. ರಾಣಿ, ನಾಗರೀಕರು
- ಶ್ರೀಮತಿ. ಪದ್ಮಿನಿ, ನಾಗರೀಕರು

ವಾರ್ಡ್ ಸಮತಿ ಸಭೆಯನ್ನು ವಾರ್ಡ್ ಸಮಿತಿ ಕಾರ್ಯದರ್ಶಿಗಳಾದ ಶ್ರೀ. ಗುರುಸಿದ್ದಪ್ಪ .ಜಿ ರವರು ವಾರ್ಡ್ ಸಮಿತಿ ಅಧ್ಯಕ್ಷರು, ಸಮಿತಿಯ ಸದಸ್ಯಗಳು ಹಾಗೂ ವಾರ್ಡ್ ಸಂಖ್ಯೆ: 22ರ ನಾಗರೀಕರು ಹಾಗೂ ಎಲ್ಲಾ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಿದರು.

ಶ್ರೀ. ರಾಮಕೃಷ್ಣರೆಡ್ಡಿ, ನೋಡೆಲ್ ಅಧಿಕಾರಿಗಳು ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರುಗಳನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು, ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು. ಹಾಗೂ ಕಮಿಟಿ ಕಾರ್ಯದರ್ಶಿಗಳು ಮಾತನಾಡುತ್ತಾ ದಿನಾಂಕ; 20-03-2021 ರಂದು ನಡೆದ ವಾರ್ಡ್ ಸಮಿತಿಯ ನಡವಳಿಗಳನ್ನು ಪುನರಾವಲೋಕನ ಮಾಡಲಾಯಿತು. ಹಿಂದಿನ ಸಭೆಯಲ್ಲಿ ತೆಗೆದುಕೊಂಡಿದ್ದ ತೀರ್ಮಾನಗಳನ್ನು ಕುರಿತು ಈ ದಿನಾಂಕದವರೆಗೆ ನಿರ್ವಹಿಸಿದ ಕೆಲಸಗಳ ಬಗ್ಗೆ ಸದಸ್ಯರುಗಳಿಗೆ ತಿಳಿಸಲಾಯಿತು.

- ಶ್ರೀ. ಗುರುಸಿದ್ದಪ್ಪ .ಜಿ ಸಹಾಯಕ ಅಭಿಯಂತರರು ರವರು ಮಾತನಾಡುತ್ತಾ, ಕನಕನಗರ 17ನೇ ಕ್ರಾಸ್, 18ನೇ ಕ್ರಾಸ್ ಹಾಗೂ 21ನೇ ಕ್ರಾಸ್ ನವರೆಗೆ ರಸ್ತೆ ಕಾಮಗಾರಿಯನ್ನು ಪ್ರಗತಿಯಲ್ಲಿರುವ ಬಗ್ಗೆ ನೋಡೆಲ್ ಅಧಿಕಾರಿಗಳಿಗೆ ತಿಳಿಸಿದರು.
- ಶ್ರೀಮತಿ. ಉಷಾರಾಣಿ, ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 +ve ಕೇಸ್ ನಿಂದ ಇಬ್ಬರು ಮೃತಪಟ್ಟಿದ್ದಾರೆಂದು ತಿಳಿಸುತ್ತಾ, ಪ್ರತಿದಿನ ಸರಾಸರಿ 3-4 ಕೋವಿಡ್-19 +ve ಕೇಸ್ ದಾಖಲಾಗುತ್ತಿದೆ ಎಂದು ಹೇಳಿದರು. ಹಾಗೂ ವಾರ್ಡ್ ನಲ್ಲಿ ಒಟ್ಟು 415 ಕೇಸ್ ಗಳಿದ್ದು, ವಯಸ್ಸಾದವರು ಹೊರಗೆ ಬರದಂತೆ ಮತ್ತು ಮಾಸ್ಕ್ ಅನ್ನು ಎಲ್ಲರೂ ಕಡ್ಡಾಯವಾಗಿ ಹಾಕಿಕೊಳ್ಳುವಂತೆ ಸೂಚಿಸಲಾಗಿದೆ ಎಂದು ಹೇಳಿದರು. ನಮ್ಮ ವಾರ್ಡ್ ನ ವ್ಯಾಪ್ತಿಯಲ್ಲಿ ಯಾವುದೇ ಈಜುಕೊಳ ಹಾಗೂ ಉದ್ಯಾನವನಗಳು ಇರುವುದಿಲ್ಲವೆಂದು ತಿಳಿಸುತ್ತಾ ಹಾಗೂ ಇರುವ Gymಗಳನ್ನು ಈಗಾಗಲೇ ಮುಚ್ಚಲಾಗಿದೆ ಎಂದು ತಿಳಿಸಿದರು.
- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಖಾತಾ ವರ್ಗಾವಣೆ, ಖಾತಾ ನೋಂದಣಿ, ತೆರಿಗೆ ಹ್ಣ ಪಾವತಿ, ಹೊಸದಾಗಿ ಚುನಾವಣೆ ಗುರುತೀನ ಚೀಟಿ ಮಾಡುವ ಬಗ್ಗೆ ಹಾಗೂ ಇನ್ನಿತರ ಕಂದಾಯ

ಪಾವತಿಗಳ ಬಗ್ಗೆ ಸಭೆಗೆ ಹಾಜರಿದ್ದ ಕಂದಾಯ ಇಲಾಖೆಯರೊಂದಿಗೆ ಹೆಚ್ಚಿನ ಕಾರ್ಯವಿಧಾನಗಳ ಬಗ್ಗೆ ಚರ್ಚಿಸಲಾಯಿತ್ತು.

- C.I.L Layout ನಲ್ಲಿ Eletrical pole ಅನ್ನು ಸ್ಥಳಾಂತರಿದುವ ಬಗ್ಗೆ ಸಿ4 ನ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಗೆ ಪತ್ರವನ್ನು ಬರೆದಿರುವುದಾಗಿ ತಿಳಿಸಿದರು.
- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಸನ್ ರೈಸ್ ಕಾಲೋನಿಯಲ್ಲಿ ಅಡ್ಡಮೋರಿಗೆ ಸಂಬಂಧಿಸಿದ ಉಳಿದ ಎಲ್ಲಾ ಕಾಮಗಾರಿಯನ್ನು ಶೀಘ್ರವಾಗಿ ಮುಗಿಸುವಂತೆ ಹಾಗೂ 6ನೇ 'ಎ' ಕ್ರಾಸ್ ರಸ್ತೆಯಲ್ಲಿ Poth holes ಗಳನ್ನು ಹಾಕುವಂತೆ ಶ್ರೀ ಪ್ರಸನ್ನ ಕುಮಾರ್ (ಗುತ್ತಿಗೆ ದಾರರು) ರವರಿಗೆ ದೂರವಾಣಿ ಮೂಲಕ ತಿಳಿಸಿದರು.
- ಶ್ರೀಮತಿ ಪದ್ಮಿನಿ, ನಾಗರೀಕರು ಮಾತನಾಡುತ್ತಾ, ಕನಕನಗರದ 6ನೇ 'ಎ' ಕ್ರಾಸ್ ನಲ್ಲಿ ರಸ್ತೆಯ ಕಾಮಗಾರಿಯನ್ನು ದುರಸ್ಥಿ ಪಡಿಸುವ ಬಗ್ಗೆ ತಿಳಿಸಿದರು. ಅದಕ್ಕೆ ಪ್ರತಿಯಾಗಿ ನೋಡೆಲ್ ಅಧಿಕಾರಿಗಳು ವೆಟ್ ಮಿಕ್ಸ್ ಮತ್ತು ಜಲ್ಲಿಗಳಿಂದ ಗುಂಡಿಗಳನ್ನು ತುಂಬಲು ಈಗಾಗಲೇ ಶ್ರೀ ಪ್ರಸನ್ನ ಕುಮಾರ್ (ಗುತ್ತಿಗೆದಾರರು) ರವರಿಗೆ ತಿಳಿಸಿ ಹಾಗೂ ಕಾಮಗಾರಿಯು ಪ್ರಗತಿಯಲ್ಲಿರುವ ಬಗ್ಗೆ ತಿಳಿಸಿದರು.
- ಸಭೆಯಲ್ಲಿ ನೋಡೆಲ್ ಅಧಿಕಾರೊಗಳು ರಸ್ತೆಗಳಲ್ಲಿ ಅಲ್ಲಲ್ಲಿ ಗುಂಡಿಗಳನ್ನು ಬಿದ್ದಿರುವುದರಿಂದ ತಮ್ಮ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಗುಂಡಿಗಳನ್ನು ತುಂಬಲು ಸಭೆಗೆ ಹಾಜರಿದ್ದ ಸಹಾಯಕ ಅಭಿಯಂತರರಿಗೆ ತಿಳಿಸಿದರು. ಶೀಘ್ರವಾಗಿ ಗುಂಡಿಗಳನ್ನು ಮುಚ್ಚುವ ಬಗ್ಗೆ ಕ್ರಮಗೈಗೊಳ್ಳುವ ಬಗ್ಗೆ ತಿಳಿಸಿದರು.
- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, Bescom ಇಲಾಖೆ, BWSSB ಇಲಾಖೆ ಮತ್ತು Traffic ಪೋಲೀಸ್ ಇಲಾಖೆಯವರು ಮುಂದಿನ ಸಭೆಯಲ್ಲಿ ತಪ್ಪದೇ ವಾರ್ಡ್ ಸಮಿತಿ ಸಭೆಗೆ ಹಾಜರಾಗಲು ನೋಟೀಸ್ ಅನ್ನು ನೀಡುವಂತೆ ತಿಳಿಸಿದರು.
- ಶ್ರೀ ವೆಂಕಟೇಶ್, ನಾಗರೀಕರು ಮಾತನಾಡುತ್ತಾ, ಕನಕನಗರದ 6ನೇ ಕ್ರಾಸ್ ನಲ್ಲಿ Poth holes ತುಂಬಲು ತಿಳಿಸಿದರು. ಅದಕ್ಕೆ ಪ್ರತಿಯಾಗಿ ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ ಈಗಾಗಲೇ Poth holes ಗಳನ್ನು ತುಂಬಲು ಕಾಮಗಾರಿಯನ್ನು ಕೈಗೊಳ್ಳುತ್ತೀರುವ ಬಗ್ಗೆ ತಿಳಿಸಿದರು.
- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಯಾಗಪ್ಪ ಲೇಔಟ್ 4ನೇ 'ಬಿ' ಕ್ರಾಸ್ ರಸ್ತೆಯ ಬದಿಯಲ್ಲಿ ಖಾಲಿ ನಿವೇಶನ ಜಾಗದಲ್ಲಿ ಅನಧಿಕೃತವಾಗಿ ಶೆಡ್ ಹಾಕಿರುವುದರಿಂದ ಕೂಡಲೇ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿರುವುದರಿಂದ ಈಗಾಗಲೇ ಸಂಬಂಧಪಟ್ಟವರಿಗೆ 3 ಬಾರಿ ಮೌಖಿಕವಾಗಿ ತಿಳಿಸಿದರು ಸಹ ತೆರವುಗೊಳಿಸದೇ ಇದ್ದುದರಿಂದ ಕೂಡಲೇ ಶೆಡ್ ಗಳನ್ನು ತೆರವುಗೊಳಿಸುವಂತೆ ಇನ್ನೊಮ್ಮೆ ನೋಟೀಸ್ ಅನ್ನು ಜಾರಿಗೊಳಿಸಲಾಗಿದ್ದು, ಹಾಗೂ ಈಗಾಗಲೇ ಮೇಲಾಧಿಕಾರಿಗಳಿಂದ ಶೆಡ್ ಗಳನ್ನು ತೆರವುಗೊಳಿಸುವ ಬಗ್ಗೆ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು.

- ಶ್ರೀ.ಗಂಗಾಧರ್ ಮಾತನಾಡುತ್ತಾ, ಪಟೇಲ್ ಮುನಿಯಪ್ಪ ಲೇಔಟ್ ನ 4ನೇ ಕ್ರಾಸ್ ನಲ್ಲಿ ಅಡ್ಡಮೋರಿ ನಿರ್ಮಾಣ ಮಾಡುವಂತೆ ತಿಳಿಸಿದರು. ಅದಕ್ಕೆ ಪ್ರತಿಯಾಗಿ ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ ಈಗಾಗಲೇ ಕಾಮಗಾರಿ ಪ್ರಗತಿಯಲ್ಲಿರುವ ಬಗ್ಗೆ ತಿಳಿಸಿದರು.
- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಲ್ಲ ಬೋರ್ ವೇಲ್ ರಿಪೇರಿಗಳ ಬಗ್ಗೆ ಪಟ್ಟಿಗಳನ್ನು ನೀಡುವಂತೆ ತಿಳಿಸಿದರು. ಅದಕ್ಕೆ ಪ್ರತಿಯಾಗಿ ಸಹಾಯಕ ಅಭಿಯಂತರರು ಈಗಾಗಲೇ ಬೋರ್ ವೇಲ್ ರಿಪೇರಿಗಳ ಪಟ್ಟಿಗಳ ಕಡತವನ್ನು (BWSSB) ಅಧಿಕಾರಿಗಳಿಗೆ ಸಲ್ಲಿಸಿರುವುದಾಗಿ ತಿಳಿಸಿದರು.
- ಶ್ರೀ. ಪ್ರಶಾಂತ್ ನಾಗರೀಕರು ಮಾತನಾಡುತ್ತಾ, C.I.L Layout ನಲ್ಲಿರುವ 5ನೇ ಕ್ರಾಸ್ ರಸ್ತೆಯಲ್ಲಿ ಒಳಚರಂಡಿ ಬ್ಲಾಕ್ ಆಗಿರುವುದರಿಂದ ಅದನ್ನು (BWSSB) ಅಧಿಕಾರಿಗಳಿಗೆ ತಿಳಿಸಿ ಸರಿಪಡಿಸುವಂತೆ ಹೇಳಿದರು.
- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಯಾಗಪ್ಪ ಲೇಔಟ್ ಕ್ರಾಸ್ ರಸ್ತೆಯ ಬದಿಯಲ್ಲಿ ಶ್ರೀ ಕ್ಲಸ್ಟರ್ ಎಂಬುವವರು ಅನಧಿಕೃತವಾಗಿ ಶೆಡ್ ಹಾಕಿರುವುದರಿಂದ ಕೂಡಲೇ ತಮ್ಮ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿರುವುದರಿಂದ ಈಗಾಗಲೇ ತಮಗೆ ಕೂಡಲೇ ಶೆಡ್ ಗಳನ್ನು ತೆರವುಗೊಳಿಸುವಂತೆ ನೋಟೀಸ್ ಅನ್ನು ಜಾರಿಗೊಳಿಸಲಾಗಿದ್ದು, ಹಾಗೂ ಈಗಾಗಲೇ ಮೇಲಾಧಿಕಾರಿಗಳಿಂದ ಶೆಡ್ ಗಳನ್ನು ತೆರವುಗೊಳಿಸುವ ಬಗ್ಗೆ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು.
- ಶ್ರೀ ಹರೀಶ್, ನಾಗರೀಕರು ಮಾತನಾಡುತ್ತಾ, ವಿ. ನಾಗೇನಹಳ್ಳಿ ಮುಖ್ಯರಸ್ತೆಗಳಲ್ಲಿ ವಾಹನಗಳು ಅತಿ ವೇಗವಾಗಿ ಸಂಚಾರಿಸುತ್ತಿರುವದರಿಂದ ರಸ್ತೆಗಳಲ್ಲಿ ರಸ್ತೆ ಉಬ್ಬು (Humps)ಗಳನ್ನು ಹಾಕುವಂತೆ ಸಂಚಾರಿ ಪೋಲೀಸ್ ಠಾಣೆಗೆ ನೋಟೀಸ್ ಅನ್ನು ಬರೆಯುವಂತೆ ತಿಳಿಸಿದರು. ಅದಕ್ಕೆ ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ ಈಗಾಗಲೇ ಸಂಚಾರಿ ಪೋಲೀಸ್ ಠಾಣೆಗೆ ನೋಟೀಸ್ ನೀಡಿರುವುದಾಗಿ ತಿಳಿಸಿದರು.
- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ವಿ. ನಾಗೇನಹಳ್ಳಿಯ ರಸ್ತೆಗಳಲ್ಲಿ Poth holesಗಳನ್ನು ತುಂಬಲು ಪೂರ್ವವಲಯದ EE ರವರಿಗೆ ಪತ್ರ ಬರೆಯುವಂತೆ ತಿಳಿಸಿದರು.
- ಶ್ರೀ. ವಿಜಯ್, ನಾಗರೀಕರು ಮಾತನಾಡುತ್ತಾ, ವಿ. ನಾಗೇನಹಳ್ಳಿಯ ಕನಕನಗರ ರಸ್ತೆಗಳು ಮತ್ತು ಯಾಗಪ್ಪ ಲೇಔಟ್ ನ ರಸ್ತೆಯಲ್ಲಿ ಸಾರ್ವಜನಿಕರಿಗೆ ಸರಿಯಾಗಿ ನೀರು ಸರಬರಾಜು ಆಗುತ್ತಿಲ್ಲವೆಂದು ತಿಳಿಸಿದರು ಹಾಗೂ ಅದಕ್ಕೆ ಸಂಬಂಧಿಪಟ್ಟ ವಾಟರ್ ಮಾನ್ ಗಳಿಗೆ ಸರಿಯಾಗಿ ನೀರು ಸರಬರಾಜು ಮಾಡುವಂತೆ ತಿಳಿಸಿದರು.
- ವಾರ್ಡ್ ನಲ್ಲಿ ಬೇಸಿಗೆಗಾಲದಲ್ಲಿ ಹೆಚ್ಚಿನ ನೀರಿನ ಸಮಸ್ಯೆಯನ್ನು ಎದುರುಸುತ್ತಿದ್ದು, ವಾರ್ಡ್ ನಲ್ಲಿ ನೀರಿನ ಅಭಾವವಿರುವುದರಿಂದ ನೀರಿನ ಟ್ರಾಕ್ಟರ್ ಗಳನ್ನು ವ್ಯವಸ್ಥೆಯನ್ನು ಮಾಡಿ ನೀರು ಸರಬರಾಜು ಮಾಡುವಂತೆ ಸಾರ್ವಜನಿಕರು ವಾರ್ಡ್ ಸಮತಿ ಸಭೆಯಲ್ಲಿ ಮನವಿ ಮಾಡಿಕೊಂಡರು.

- ಶ್ರೀ. ಕಲಿಲ್ ರೆಹಮಾನ್, ಕನಕನಗರ (KRWB) ಸದಸ್ಯರು ಮಾತನಾಡುತ್ತಾ, ಕನಕನರ 10ನೇ ಕ್ರಾಸ್ ನಲ್ಲಿ Street light ಗಳು ಹಾಳಾಗಿದ್ದು, ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಶೀಘ್ರವಾಗಿ Street light ಗಳನ್ನು ಸರಿಪಡಿಸುವಂತೆ ತಿಳಿಸಿದರು.
- ಶ್ರೀ. ಸಂದೀಪ್, ನಾಗರೀಕರು ಮಾತನಾಡುತ್ತಾ, ವಿ. ನಾಗೇನಹಳ್ಳಿ ವ್ಯಾಪ್ತಿಯಲ್ಲಿ ಬರುವ ಪ್ರಭಾಕರ್ ಲೇಔಟ್ ನಲ್ಲಿ ಒಳಚರಂಡಿ ಹಾಳಾಗಿದ್ದು ಅದನ್ನು ಶೀಘ್ರವಾಗಿ ಸರಿಪಡಿಸುವಂತೆ ತಿಳಿಸಿದರು.
- ಸನ್ ರೈಸ್ ಕಾಲೋನಿಯ ಮುಖ್ಯರಸ್ತೆಯಿಂದ ಸಿ.ಐ.ಎಲ್ ಲೇಔಟ್ ನ Garbage point ವರೆಗಿನ ರಸ್ತೆಯನ್ನು ಸ್ವಚ್ಛಗೊಳಿಸುವಂತೆ ನೋಡೆಲ್ ಅಧಿಕಾರಿಗಳು ತಿಳಿಸಿದರು.
- ವಾರ್ಡ್ ನ ವ್ಯಾಪ್ತಿಯಲ್ಲಿ ಬರುವ ಕೆಲವು ಅಡ್ಡರಸ್ತೆ ಹಾಗೂ ಮುಖ್ಯರಸ್ತೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿರುವ ಬಗ್ಗೆ ತಿಳಿಸಿದರು.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯವನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳು ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮತಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಕೈಗೊಂಡ ಕ್ರಮದ ಬಗ್ಗೆ ವರದಿ ಪೂರ್ಣಗೊಂಡ ಭಾವಚಿತ್ರ ಹಾಗೂ ಲಿಖಿತ ವರದಿ ತಯಾರಿಸಿಕೊಂಡು ಹಾಜರಾಗಲು ಸೂಚಿಸಿ ಹಾಗೂ ಹಾಜರಾಗದೆ ಇರುವ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಹಾಜರಾಗಿರಬೇಕೆಂದು ಸೂಚಿಸಿದರು. ಸಭೆಯನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮತಿ ಕಾರ್ಯದರ್ಶಿಗಳಾದ ಗುರುಸಿದ್ದಪ್ಪ .ಜಿ ರವರ ವಂದನಾರ್ಪಣೆಯೊಂದಿಗೆ ಮಧ್ಯಾಹ್ನ 2:45ಕ್ಕೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| (ಶ್ರೀ. ರಾಮಕೃಷ್ಣರೆಡ್ಡಿ) | (ಗುರುಸಿದ್ದಪ್ಪ .ಜಿ) |
| ನೋಡೆಲ್ ಅಧಿಕಾರಿಗಳು | ವಾರ್ಡ್ ಸಮಿತಿ ಕಾರ್ಯದರ್ಶಿ |
| ಹಾಗೂ | ಹಾಗೂ |
| ವಾರ್ಡ್ ಸಮಿತಿ ಅಧ್ಯಕ್ಷರು | ಸಹಾಯಕ ಅಭಿಯಂತರರು ವಾರ್ಡ್ ನಂ:22 |

NODAL OFFICER
WARD NO : 22
BBMP